**ಅಸಲು ದಾವ ಸಂಖ್ಯೆಃ 599/2019**

**ಪಿ.ಡಬ್ಲೂ -1**

**ದಿಃ07-07-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ SMK ರವರಿಂದಃ-**

1. ನನಗೆ ಮರಾಠಿ ಭಾಷೆ ಓದಲು ಬರುತ್ತದೆ. ದಾವಾ ಸ್ವತ್ತಿನ ಸಂಖ್ಯೆ 475/3 ಆಗಿರುತ್ತದೆ. ಸದರಿ ಸ್ವತ್ತು ಆರ್ ಸಿ ಸಿ ಮನೆ ಆಗಿರುತ್ತದೆ ಎಂದರೆ ಸರಿ. ಗೊವಿಂದ ಗಜಾನನ ಕೆನ್ನೂರಕರ ಎಂದರೆ 1ನೇ ಪ್ರತಿವಾದಿಯ ಹೆಸರು ಸದರಿ ಸ್ವತ್ತಿಗೆ ಯಾವಾಗ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಹೆಸರು ದಾವಾ ಸ್ವತ್ತಿಗೆ 1975 ರಲ್ಲಿ ಬಂದಿರುತ್ತದೆ ಹಾಗೂ ಅದರ ಕುರಿತು ನಿಡಿ-1 ರಲ್ಲಿ ನಮೂದು ಇರುತ್ತದೆ ಎಂದರೆ ಸರಿ. 1975 ರಿಂದ ಇಲ್ಲಿಯವರೆಗೂ ಕಾರ್ಪೋರೇಶನನ ದಾಖಲೆಗಳಲ್ಲಿ 1ನೇ ಪ್ರತಿವಾದಿಯರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸುಳ್ಳು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವಾ ಸ್ವತ್ತನ್ನು ಇಂದುಮತಿ ನಾರಾಯಣ ಕಾಂಗಳೆ ರವರು ಖರೀದಿಸಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ಸ್ವತ್ತಿಗೆ 475/3 ಎಂಬ ಸಂಖ್ಯೆ ಇತ್ತು ಹಾಗೂ ಅದೇ ರೀತಿ ನಿಡಿ-1 ರ ದಾಖಲೆಯಲ್ಲಿ ಸ್ವತ್ತಿನ ಸಂಖ್ಯೆ ಇರುತ್ತದೆ ಎಂದರೆ ಸರಿ. ನಂತರ 1ನೇ ಪ್ರತಿವಾದಿ ಅದನ್ನು ಖರೀದಿಸಿದಾಗ ಸ್ವತ್ತಿನ ಸಂಖ್ಯೆ 475/3ಬಿ ಆಗಿತ್ತು ಹಾಗೂ ಸದರಿ ಸಂಖ್ಯೆ ನಿಡಿ-1 ರಲ್ಲಿ ನಮೂದು ಇರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ದಾಖಲೆ ಬಂದ ನಂತರ ಅವರು ಅಲ್ಲಿ ಕಟ್ಟಡ ಕಟ್ಟುವ ಸಲುವಾಗಿ ಅನುಮತಿ ಪಡೆದಿರುತ್ತಾರೆ ಎಂದರೆ ಹೌದು. ಸಾಕ್ಷಿ ಮುಂದುವರೆದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಆಂಗ್ಲ ಭಾಷೆ ಓದಲು ಬರುತ್ತದೆ. ನಿಡಿ-2 ರ ಪ್ರಕಾರ 1ನೇ ಪ್ರತಿವಾದಿಗೆ ಕಟ್ಟಡ ಕಟ್ಟಲು ಕಾರ್ಪೋರೇಶನ ದಿಂದ ಪರವಾನಿಗೆ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಅನುಮತಿ ಪಡೆದ ನಂತರ 1ನೇ ಪ್ರತಿವಾದಿ ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿ.

1975 ರಿಂದ ಇಲ್ಲಿಯವರೆಗೂ 1ನೇ ಪ್ರತಿವಾದಿಯ ಹೆಸರು ಕಾರ್ಪೋರೇಶನ ದಾಖಲೆಗಳಲ್ಲಿ ತೋರಿಸಿರುವುದನ್ನು ನೋಡಿ ನಾನು ಕಾರ್ಪೋರೇಶನ ದಲ್ಲಿ ಅದನ್ನು ಪ್ರಶ್ನಿಸಿರುತ್ತೇನೆ. ಸದರಿ ಸ್ವತ್ತು ಗಜಾನನ ವೆಂಕೋಬಾ ಕೆನ್ನೂರಕರ ರವರಿಗೆ ಸೇರಿದ್ದು ಎಂಬ ಆಧಾರದ ಮೇಲೆ ನಾನು ಸದರಿ ದಾಖಲೆಯನ್ನು ಪ್ರಶ್ನಿಸಿರುತ್ತೇನೆ. 1ನೇ ಪ್ರತಿವಾದಿಯ ಹೆಸರು ದಾವಾ ಸ್ವತ್ತಿನ ದಾಖಲೆಗಳಲ್ಲಿ ನಮೂದಾಗಿರುತ್ತದೆ ಆದ್ದರಿಂದ ಅದನ್ನು ಪ್ರಶ್ನಿಸಿ ನಾನು ಕಾರ್ಪೋರೇಶನ ನಲ್ಲಿ ತಕರಾರು ಹಾಗೂ ದಾವೆ ಸಲ್ಲಿಸಿರುತ್ತೇನೆ. ಸದರಿ ದಾವೆ ಯಾವಾಗ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಆ ದಾವೆಗೆ ಸಂಬಂಧಪಟ್ಟಂತೆ ನಾನ ಈ ನ್ಯಾಯಾಲಯದಲ್ಲಿ ಯಾವುದಾದರೂ ದಾಖಲೆ ಹಾಜರುಪಡಿಸಿರುತ್ತೀನಾ ಎಂದರೆ ಸಾಕ್ಷಿ ಅದರ ಬಗ್ಗೆ ತನ್ನ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಆ ರೀತಿ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಆ ರೀತಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ ಆದ್ದರಿಂದ ಅದರ ಕುರಿತು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿ ಕಾರ್ಪೋರೇಶನಗಿಂತಲೂ ಈ ನ್ಯಾಯಾಲಯ ದೊಡ್ಡದು ಆದ್ದರಿಂದ ಇಲ್ಲಿ ದಾವೆ ಹೂಡಿರುವುದಾಗಿ ನುಡಿಯುತ್ತಾರೆ.

2. ದಾವಾ ಸ್ವತ್ತಿನಲ್ಲಿ ಕಟ್ಟಡ ಪರವಾನಿಗೆ ಪಡೆದು ಕಟ್ಟಡ ಕೆಲಸ ಪ್ರಾರಂಭವಾದ ನಂತರ ನಾನು ಕಾರ್ಪೋರೇಶನಗೆ ತಕರಾರು ಸಲ್ಲಿಸಿರುತ್ತೇನೆ. ಯಾವ ಇಸವಿಯಲ್ಲಿ ಸದರಿ ತಕರಾರು ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ತಕರಾರಿನ ಪ್ರತಿಯನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀನೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಆ ರೀತಿ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಆದ್ದರಿಂದ ಅದರ ಕುರಿತು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ದಾವಾ ಸ್ವತ್ತಿನ ಮಾಲೀಕರು ಎಂದು ನನಗೆ ತಿಳಿದಿತ್ತು ಆದ್ದರಿಂದ ನಾನು ಅವರ ವಿರುದ್ದ ಕಾರ್ಪೋರೇಶನದಲ್ಲಿ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಹಾಗೂ

ಅವರ ಹೆಸರಿಗೆ ನೀಡಿದ ಕಟ್ಟಡ ಪರವಾನಿಗೆಯ ವಿರುದ್ಧ ಸಹ ನಾನು ತಕರಾರು ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಿದ ದಿನದಿಂದ ಅಲ್ಲಿಯೇ ವಾಸವಿರುತ್ತಾರೆ ಎಂದರೆ ಸಾಕ್ಷಿ ತಾನೂ ಸಹ ಅಲ್ಲಿಯೇ ವಾಸವಿದ್ದರು ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನಲ್ಲಿ ಮೂರು ವರ್ಷ ವಾಸವಿದ್ದೆ. 1973 ರಿಂದ 1975 ರವರೆಗೂ ನಾನು ಅಲ್ಲಿ ವಾಸವಿದ್ದೆ. ಅಲ್ಲಿ ಕಟ್ಟಡ ಕಟ್ಟಲು ಪರವಾನಿಗೆಯನ್ನು 1982 ರಲ್ಲಿ ನೀಡಲಾಗಿತ್ತು ಎಂದರೆ ಸಾಕ್ಷಿ 1972 ರಲ್ಲಿ ಕಟ್ಟಡ ಕಟ್ಟಿ ತಯಾರಾಗಿತ್ತು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**